3. The Police Commissioner, Bangalore	:	Member
4. Dr.H. Narsimaiah Ex-Vice Chancellar of Bangalore University	:	Member
5. Dr. Sisil J. Saldhana Director, Taxnomic Studies Centre, Bangalore.	:	Member
6. Sri M.A. Parthasarathi Chairman, Urban Art Commission, Bangalore	:	Member
7. Director of Horticulture	:	Member Secretary

2. **The guidelines of Bangalore Trust are :**

1. To Maintain and up keep the lalbagh gardens, Cubbonpark and L.R.D.E. Gardens and to make further improvement for preserving its glory
2. To conduct Horticultural shows for the benifit of the public and to charge entrance for same;
3. To invest the Corpus Fund in any scheduled Nationalised Bank approved by the Government;
4. To accept donations and grants and to deal with the same for the purpose of Trust;
5. To institute on Award honouring famous horticulturists who have done something very special in furtherence of Horticulture.

3. The Bangalore Garden trust has not submitted any report to the Government.

4. Does not arise.

ತೆಂಗಿನ ಮರಗಳಿಗೆ ನುಸಿರೋಗ

490 - ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ತೆಂಗಿನ ಮರಗಳಿಗೆ ನುಸಿ ರೋಗ ತಗುಲಿ ರೈತರು ಕಂಗಾಲಾಗಿರುವುದು ಸರ್ಕಾರದವರಿಗೆ ಗೊತ್ತಿದೆಯೇ?

ಅ) ರಾಜ್ಯದ ಯಾವ ಯಾವ ಪ್ರದೇಶಗಳಲ್ಲಿ ಇದು ಕಾಣಿಸಿಕೊಂಡಿದೆ?

ಇ) ಹಾಗಿದ್ದಲ್ಲಿ ಆ ರೋಗ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಹೌದು.

ಆ) ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ

ಇ) ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಿದೆ.

ಅನುಬಂಧ - 1

ಕರ್ನಾಟಕ ರಾಜ್ಯದಲ್ಲಿ ತೆಂಗು ಬೆಳೆಯುವ ಪ್ರಮುಖ ಜಿಲ್ಲೆಗಳಲ್ಲಿ ತೆಂಗು ನುಸಿ ಭಾದೆಗೆ ತುತ್ತಾದ ಮರಗಳ ವಿವರ ವಿಸ್ತೀರ್ಣದ ಬಗ್ಗೆ ವಿವರ

ಕ್ರ. ಸಂ	ಜಿಲ್ಲೆ	ತೆಂಗಿನ ನುಸಿ ಭಾದೆಗೆ ತುತ್ತಾದ ಮರಗಳ ಒಟ್ಟು ವಿಸ್ತೀರ್ಣ (ಲಕ್ಷ ಹೆ. ಗಳಲ್ಲಿ)	ನುಸಿ ಭಾದೆಗೆ ತುತ್ತಾದ ಒಟ್ಟು ಮರಗಳ ಸಂಖ್ಯೆ (ಲಕ್ಷಗಳಲ್ಲಿ)
1	ತುಮಕೂರು	0.052	7.85
2	ಮಂಡ್ಯ	0.039	5.47
3	ಚಿಕ್ಕಮಗಳೂರು	0.035	5.30
4	ಬೆಂಗಳೂರು (ನಗರ)	0.031	4.395
5	ಬೆಂಗಳೂರು (ಗ್ರಾಮಾಂತರ)	0.04	6.300
6	ಚಿತ್ರದುರ್ಗ	0.073	11.290
7	ದಾವಣಗೆರೆ	0.008	1.15
8	ಹಾಸನ	0.055	8.29
9	ಕೋಲಾರ	0.045	6.78
10	ಶಿವಮೊಗ್ಗ	0.011	1.61
11	ಮೈಸೂರು	0.023	3.50
12	ಚಾಮರಾಜನಗರ	0.011	1.60
13	ಉತ್ತರ ಕನ್ನಡ	0.003	0.410
14	ದಕ್ಷಣ ಕನ್ನಡ	ನುಸಿ ಪೀಡೆ ಬಾಧೆಯ ಬಗ್ಗೆ ಪ್ರಾಥಮಿಕ ವರದಿ ಇದೆ	
	ಒಟ್ಟು	**0.426**	**64.645**

ಅನುಬಂಧ - 2

ನುಸಿ ಭಾದೆಯ ಪ್ರಮಾಣವನ್ನು ತಿಳಿಯಲು ಎಲ್ಲಾ ತೆಂಗು ಬೆಳೆಯುವ ಜಿಲ್ಲೆಗಳಲ್ಲಿ ಸಮೀಕ್ಷೆ ತಂಡಗಳ ಮೂಲಕ ಗಣತಿ ಮಾಡಲಾಗುತ್ತದೆ. ಇದರಂತೆ ಪ್ರಸಕ್ತ ರಾಜ್ಯದ 14 ಜಿಲ್ಲೆಗಳಲ್ಲಿ 65 ಲಕ್ಷ ತೆಂಗಿನ ಮರಗಳು ನುಸಿ ಪೀಡೆಗೆ ಒಳಗಾಗಿದೆ ಎಂದು ಸಮೀಕ್ಷಿಸಲಾಗಿದೆ. ಈ ನುಸಿ ಭಾದೆಯು ಗಮನಕ್ಕೆ ಬಂದ ಕೂಡಲೇ ಕೃಷಿ ವಿಶ್ವವಿದ್ಯಾಲಯದ ತಜ್ಞರೊಂದಿಗೆ ವ್ಯಾಪಕವಾಗಿ ಚರ್ಚಿಸಿ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ರೂಪು ರೇಷಗಳನ್ನು ತಯಾರಿಸಲಾಯಿತು. ತೆಂಗು ಬೆಳೆಯುವ ಮುಖ್ಯ ಜಿಲ್ಲೆಗಳಲ್ಲಿ ವಿಶ್ವ ವಿದ್ಯಾನಿಲಯದ ತಜ್ಞರೊಂದಿಗೆ ವ್ಯಾಪಕ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ವಿವಿಧ ಪ್ರಚಾರ ಮಾಧ್ಯಮಗಳ ಮೂಲಕವೂ ಸಹ ರೈತರಿಗೆ ನುಸಿ ಭಾದೆಯನ್ನು ಹತೋಟಿಗೆ ತರುವ ಬಗ್ಗೆ ಮಾಹಿತಿ ನೀಡಲಾಯಿತು. ರೈತರಲ್ಲಿ ಜಾಗೃತಿ ಮೂಡಿಸಲು ಕರಪತ್ರಗಳನ್ನು ಮುದ್ರಿಸಿ ಹಂಚಲಾಯಿತು.

ಕರ್ನಾಟಕ ಸರ್ಕಾರವು ನುಸಿ ಭಾದಿತ ಸಾಮೂಹಿಕವಾಗಿ ನಿವಾರಣಾ ಕ್ರಮಗಳನ್ನು ತೆಗೆದುಕೊಳ್ಳಲು ರೈತರಿಗೆ ಶೇ.50 ರ ರಿಯಾಯಿತಿಗಳಲ್ಲಿ ಕೀಟನಾಶಕಗಳನ್ನು ಒದಗಿಸಲು 376 ಲಕ್ಷ ರೂ.ಗಳ ಯೋಜನೆಗೆ ಮಂಜೂರಾತಿ ನೀಡಿದೆ. ಈ ಯೋಜನೆಯಡಿ 244 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಸದರಿ ಕಾರ್ಯಕ್ರಮವನ್ನು ಸಮರೋಪಾದಿಯಲ್ಲಿ ಸಾಮೂಹಿಕವಾಗಿ ಅನುಷ್ಠಾನಗೊಳಿಸಬೇಕಾಗಿರುವುದರಿಂದ ಕ್ಷೇತ್ರ ಮಟ್ಟದಲ್ಲಿ ತೋಟಗಾರಿಕೆ ಇಲಾಖೆಯ ಸಿಬ್ಬಂದಿ ಮಾತ್ರವೇ ಮಾಡಲು ಅಸಾಧ್ಯವಾಗುವುದರಿಂದ ಇತರೆ ಇಲಾಖೆಯ ಸಿಬ್ಬಂದಿ ಮತ್ತು ವಾಹನಗಳನ್ನು ಒಳಗೊಂಡಂತೆ ತಂಡವನ್ನು ರಚಿಸಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತದೆ. ಈ ಉದ್ದೇಶಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಯವರನ್ನು ಒಳಗೊಂಡಂತೆ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿಯನ್ನು ರಚಿಸಿ ಈ ಸಮೀತಿಯ ಮುಖೇನ ಜಿಲ್ಲಾ ಮಟ್ಟದಲ್ಲಿ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲು ಬೇಕಾದ ಎಲ್ಲಾ ಸಿದ್ದತೆಗಳನ್ನು ತೀರ್ಮಾನಗಳನ್ನು ತೆಗೆದುಕೊಳ್ಳುವ ಅಧಿಕಾರವನ್ನು ನೀಡಲಾಗಿದೆ. ಇದೇ ರೀತಿ ತಾಲ್ಲೂಕು ಮಟ್ಟದಲ್ಲಿ ಮತ್ತು ಹೋಬಳಿ ಮಟ್ಟದಲ್ಲಿ ಉಪ ಸಮಿತಿಗಳನ್ನು ರಚಿಸಿ ಇವುಗಳ ಮುಖೇನ ಪರಿಣಾಮಕಾರಿಯಾಗಿ ರೈತರ ತೋಟಗಳಲ್ಲಿ ನುಸಿ ಭಾದೆ ಹತೋಟಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ತೆಗೆದುಕೊಳ್ಳಬೇಕಾದ ಪ್ರತಿಯೊಂದು ಅಂಶದ ಬಗ್ಗೆ ವಿವರವಾದ ತಾಂತ್ರಿಕ ಸೂಚನೆಗಳನ್ನು ಒಳಗೊಂಡಂತೆ ಸುತ್ತೋಲೆಯನ್ನು ಹೊರಡಿಸಲಾಗಿದೆ. ಸದ್ಯದಲ್ಲಿ ನುಸಿ ಭಾದಿತ ಎಲ್ಲಾ ಜಿಲ್ಲೆಗಳಲ್ಲಿ ಹತೋಟಿ ಕಾರ್ಯಕ್ರಮವು ಈಗಾಗಲೇ ಜಾರಿಗೊಳಿಸಿದ್ದು, ತ್ವರಿತಗತಿಯಲ್ಲಿ ಮುಂದುವರಿಯುತ್ತಿದೆ. ಒಟ್ಟಿನಲ್ಲಿ ಸರ್ಕಾರವು ನುಸಿ ಭಾದೆ ವಿಷಯವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದು, ನುಸಿ ಭಾದೆಯನ್ನು ಹತೋಟಿಗೆ ತರಲು ಬೇಕಾದ ಎಲ್ಲಾ ಕ್ರಮಗಳನ್ನು ಪರಿಣಾಮಕಾರಿಯಾಗಿ ಕೈಗೊಂಡು ರಾಜ್ಯದಲ್ಲಿ ತೆಂಗು ಬೆಳೆಯನ್ನು ರಕ್ಷಿಸಿ ರೈತರ ಹಿತಾಸಕ್ತಿಯನ್ನು ಕಾಪಾಡಲು ಬದ್ಧವಾಗಿದೆ ಮತ್ತು ಈ ದಿಸೆಯಲ್ಲಿ ಸಮರೋಪಾದಿಯಲ್ಲಿ ಕಾರ್ಯೋನ್ಮುಖವಾಗಿದೆ.